


೩೩ನೆಯ ಸಂಚಿಕೆ

ಗುರುವಾಣಿ

# ನಮ್ಮಮ್ಮನಿಗಾಗಿ ನಮ್ಮವರಿಗೊಂದು ಪತ್ರ



ಪ್ರಿಯ ಗೋಬಂಧು,

ಸಪ್ರೇಮ ನಾರಾಯಣ ಸ್ಮರಣೆಗಳು.

ನಿನಗರಿವಿದೆ 'ಗೋವು' ರಾಮಚಂದ್ರಾಪುರಮಠದ ಜೀವನಾಡಿಯೆಂದು...
ನಿನಗರಿವಿದೆ ನಮ್ಮ ಬದುಕು ಗೋಚರಣಗಳಿಗೆ ಸಮರ್ಪಿತವಾಗಿದೆಯೆಂದು.....
ನಿನಗರಿವಿದೆ 'ನಮ್ಮವರಿಗೇ ತಿಳಿಯದ ನಮ್ಮ ಮಠವನ್ನು ಇಂದು ಜಗತ್ತಿಗೇ ಪರಿಚಯಿಸಿದ್ದು ಗೋಮಾತೆಯೇ' ಎಂದು....
ಹೀಗಿರುವಾಗ ಗೋಮಾತೆಯ ವಿಷಯದಲ್ಲಿ ನಾವು, ನೀನು ನಿಷ್ಕ್ರಿಯವಾಗಿರುವುದು ಸಾಧುವೇ ?
ಗೋವಂಶವೇ ನಶಿಸಿ ಹೋಗುತ್ತಿರುವಾಗ ನಾವು ಕೈಕಟ್ಟಿ ಕೂರಲು ಸಾಧ್ಯವೇ ?
ಎಂದೆಂದಿಗೂ ಇಲ್ಲ.....
ಆದರೆ ಮಾಡುವುದೇನು ?
ಗೋರಕ್ಷಣೆಯ ಕಾನೂನು ತರೋಣವೆಂದರೆ....
**'ಸಂಸತ್ತು'** ನನ್ನ ಕೈಯಲ್ಲಿಲ್ಲ.....
ಸಂತೆಯಲ್ಲಿ ಕಟುಕರ ಪಾಲಾಗುವ ಗೋವುಗಳೆಲ್ಲವನ್ನೂ ಖರೀದಿಸಿ ಪೋಷಿಸೋಣವೆಂದರೆ..
ಅಷ್ಟು **'ಸಂಪತ್ತೂ'** ನನ್ನ ಕೈಯಲ್ಲಿಲ್ಲ...
ಗೋವನ್ನು ಸಾವಿನೆಡೆಗೆ ಸೆಳೆದೊಯ್ಯುವ ದಾನವರನ್ನು ತಡೆದು ನಿಲ್ಲಿಸೋಣವೆಂದರೆ..
ಅಷ್ಟು **'ತಾಕತ್ತೂ'** ನನ್ನ ಕೈಯಲ್ಲಿಲ್ಲ.....
ನಾನೇನು ತಾನೆ ಮಾಡಲು ಸಾಧ್ಯ ? ಎನ್ನುವೆಯಾ ?
ಇದೋ ಇಲ್ಲಿದೆ ಮಾರ್ಗ.....
ಜನಬಲ-ಧನಬಲ- ತೋಳ್ಬಲಗಳ ಹೊರತಾಗಿಯೂ ಗೋರಕ್ಷಣೆಯ ಮಹೋದ್ದೇಶವನ್ನು ಸಾಧಿಸಿಕೊಡಬಲ್ಲ ನಿರಪಾಯವಾದ ಸರಳೋಪಾಯ...!
ನೀ ಮಾಡಬೇಕಾದುದಿಷ್ಟೇ.....

**ಗವ್ಯವಸ್ತುಗಳನ್ನು ನೀನು ಹೆಚ್ಚು – ಹೆಚ್ಚು ಬಳಸುವುದು ....**
**ನಿನ್ನ ಸಂಪರ್ಕದಲ್ಲಿರುವವರೆಲ್ಲರನ್ನೂ, ಗವ್ಯವಸ್ತುಗಳನ್ನೇ ಬಳಸುವಂತೆ ಪ್ರೇರಿಸುವುದು.....**

ನೀ ಬಲ್ಲೆಯಾ, ಒಂದು ದಂತಮಂಜನವನ್ನು ಖರೀದಿಸಿದರೆ ಒಂದು ಗೋವಿಗೆ ಒಂದು ದಿನದ ಆಹಾರವನ್ನು ನೀಡಿದಂತಾಗುತ್ತದೆಂಬುದನ್ನು ?
ನಿನಗರಿವಿದೆಯಲ್ಲವೇ, ಗವ್ಯ ವಸ್ತುಗಳನ್ನು ಖರೀದಿಸುವಾಗ ನೀ ನೀಡುವ ಪ್ರತಿಯೊಂದು ರೂಪಾಯಿಯೂ ಅಸಹಾಯ ಗೋವುಗಳಿಗೆ ಮೇವು-ಹಿಂಡಿಯಾಗಿ, ನೀರು- ನೆರಳಾಗಿ ಮಾರ್ಪಡುವುದೆಂಬುದನ್ನು...?
ಬೆಲೆ ಕಟ್ಟಲಾಗದ ಅಪೂರ್ವ ಜೀವನೋಪಯೋಗಿ ವಸ್ತುಗಳು ಕೈಗೆಟುಕುವ ಬೆಲೆಯಲ್ಲಿಯೇ ಲಭ್ಯವಾಗುತ್ತಿರುವುದನ್ನು ನೀನು ಗಮನಿಸಿರುವೆಯಲ್ಲವೇ..?
ನಿತ್ಯಜೀವನದಲ್ಲಿ ಬಳಕೆಯಲ್ಲಿರುವ ರಾಸಾಯನಿಕ-ವಿಷಮಯ ವಸ್ತುಗಳನ್ನು ತ್ಯಜಿಸಿದರೆ ಅದು ಮನೆಯಲ್ಲಿರುವ ದೆವ್ವಗಳು ತೊಲಗಿದಂತೆ, ಗವ್ಯವಸ್ತುಗಳನ್ನು

**ಹೂರಣ**

**ಗುರುವಾಣಿ**
**ಮಾಸದ ಗೋವು: ಗಂಗಾತೀರಿ**
**ಗೋಗೀತೆ: ಸಾವಿರದ ಗೋವು**
**ನೆನಪು: ಮಹಾನಂದಿ**

ಪ್ರಕಾಶನ: IT4COW ಸಂಘಟನೆ
groups.yahoo.com/group/IT4COW
ಅಂತರಜಾಲ ತಾಣ: vishwagou.org, gougram.org
ಸಂಪರ್ಕ: govishva@gmail.com



ಬಳಸಲಾರಂಭಿಸಿದರೆ ಅದು ಮನೆಗೆ ದೇವತೆಗಳ ಪ್ರವೇಶವಾದಂತೆ, ಎಂಬುದನ್ನು ಒಪ್ಪುವೆಯಲ್ಲವೇ?
ಹಾಗಿದ್ದರೆ ತಡವೇಕೆ?
ಇಂದಿನಿಂದಲೇ... ಈಗಿನಿಂದಲೇ ನಿನ್ನ ಮನದಲ್ಲಿ,ಮನೆಯಲ್ಲಿ, ನಿನ್ನವರೆಲ್ಲರ ಜೀವನದಲ್ಲಿ ನೆರವೇರಲಿ ಸುವಸ್ತುಗಳ ರೂಪದಲ್ಲಿ ಕಾಮಧೇನುವಿನ ಪ್ರವೇಶ!
ಎಲ್ಲಿ ಲಭ್ಯವಿದು? ಯಾರಲ್ಲಿ? ಯಾರು ಗವ್ಯವಸ್ತುಗಳನ್ನು ನಿರ್ಮಿಸುವ, ಮನೆ-ಮನೆಗೆ ತಲುಪಿಸುವ ಪುಣ್ಯಾತ್ಮರು ಎನ್ನುವ ಪ್ರಶ್ನೆಯೇ?
**'ನಾವು + ಗೋವು = ನಾಕ'** ಎಂಬಂತಿದ್ದ ಭಾರತೀಯ ಜೀವನ ಗಣಿತ, **'ಗೋವು + ಸಾವು = ನರಕ'** ಎಂಬಂತೆ ಪರಿವರ್ತನೆಯಾದುದಕ್ಕಿಂತ ದೊಡ್ಡ ದುರಂತ ಇನ್ನಾವುದಿದೆ ಈ ದೇಶಕ್ಕೆ?
ಮರಣದ ಸಾಂಗಾತಿಯಾಗಿರುವ ಗೋವನ್ನು ಜೀವನದ ಸಂಗಾತಿಯನ್ನಾಗಿ ಮಾಡಲೆಂದೇ.. ನಿನ್ನ - ಗೋವಿನ ನಡುವೆ ಅಮೃತದ ಸೇತುವನ್ನು ಕಟ್ಟಲೆಂದೇ ಉದಯವಾಯಿತು ಒಂದು ಸಂಸ್ಥೆ..

ಅದುವೇ **'ಮಾ ಗೌ ಪ್ರಾಡಕ್ಟ್ಸ್ ಪ್ರೈ. ಲಿಮಿಟೆಡ್'**

ಸೇವೆಯ ಹೆಸರಿನಲ್ಲಿ ವ್ಯಾಪಾರ ಮಾಡುವವರನ್ನು ನೀನು ಎಲ್ಲೆಲ್ಲಿಯೂ ಕಂಡಿರಬಹುದು..
ಆದರೆ ವ್ಯಾಪಾರದ ಹೆಸರಿನಲ್ಲಿ ಸೇವೆ ಮಾಡುವವರನ್ನು ಎಲ್ಲಿಯಾದರೂ ಕಂಡಿರುವೆಯಾ?
'ಮಾ' ಮೇಲ್ನೋಟಕ್ಕೆ ಮಾಡುವುದು ವ್ಯಾಪಾರ, ನಿಜವಾಗಿ ನಡೆಯುವುದು ಗೋಸೇವೆಯೇ!
ಗೋಮಾತೆಯ ಪ್ರೇರಣೆಯ ಮೇರೆಗೆ, ಗುರುಪೀಠದ ಅಪ್ಪಣೆಯ ಮೇರೆಗೆ, ಕೋಟ್ಯಂತರ ರೂಪಾಯಿಗಳ ಬಂಡವಾಳ, ಅಪರಿಮಿತವಾದ ಮಾನವ ಸಮಯ - ಶ್ರಮಗಳ ವಿನಿಯೋಗದೊಂದಿಗೆ ಈ ಉದ್ಯಮವನ್ನು ಸಂಸ್ಥಾಪಿಸಿದ ಗೋ ಭಕ್ತ ಉದ್ಯಮಿಗಳ ಹೃದಯದಲ್ಲಿದ್ದುದು 'ಧನ' ವಲ್ಲ 'ದನ'!

> **"ಗೋರಕ್ಷೆಯ ಮಹಾಭಿಯಾನದ ಅಂಗವಾಗಿ ಸಂಸ್ಥಾಪಿತವಾದ ಈ ಉದ್ಯಮದಲ್ಲಿ ಬರುವ ಲಾಭವೆಲ್ಲವೂ ಗೋಸೇವೆಗೇ ಸಮರ್ಪಿತವಾಗಲಿ...**
> **ಒಂದುವೇಳೆ ನಷ್ಟವಾದರೆ ಅದು ನಮಗಿರಲಿ"**

ಇದು ಅವರ ಪ್ರತಿಜ್ಞೆ!
ತೊಡಗಿಸಿದ ಬಂಡವಾಳವನ್ನು ನಿರೀಕ್ಷಿಸದ ಈ ಗೋಭಕ್ತರ ಗೋಸೇವೆಯ ಹಂಬಲಕ್ಕೆ ನಮ್ಮ ಬೆಂಬಲ ಬೇಡವೇ?
ತೊಟ್ಟಿಲಿನಿಂದ ಚಟ್ಟದವರೆಗೆ ನಾವು ಕುಡಿದ ಗೋಕ್ಷೀರದ ಋಣ ತೀರಿಸಬೇಡವೇ?
ಆದುದರಿಂದ, ಕಾಲ ಮಿಂಚುವ ಮುನ್ನ, ಪರಿಸ್ಥಿತಿ ಸಂಪೂರ್ಣವಾಗಿ ಕೈಮೀರಿ ಹೋಗುವ ಮುನ್ನ, ನೀನು ಕಾರ್ಯ ಪ್ರವೃತ್ತನಾಗಬೇಕು....
ಗೋಮಾತೆಯು ಕರುಣಿಸಿ ಕೊಡುವ ಸುವಸ್ತುಗಳನ್ನು ಮನುಕುಲದಲ್ಲೆಲ್ಲಾ ಪಸರಿಸಲು ನೀನು ಮಾಧ್ಯಮವಾಗಬೇಕು....
ಆದಿ ಬಂದುವಲ್ಲವೇ ಗೋಮಾತೆ, ಎಳವೆಯಲ್ಲಿಯೇ ನಿನಗೆ ಹಾಲಿತ್ತವಳು?
ಅವಳ ಸೇವೆಗೆ ನೀನು ಪ್ರಥಮ ಆದ್ಯತೆಯನ್ನು ನೀಡಬೇಕು.
ಬೇರಾವ ಹೊಣೆಗಾರಿಕೆ ನಿನಗಿದ್ದರೂ ಅವೆಲ್ಲವೂ ಇದರ ನಂತರದ ಆದ್ಯತೆಯವು......
ನಮ್ಮ - ನಿನ್ನ ಪವಿತ್ರ ಸಂಬಂಧದ ಪ್ರತೀಕವಾಗಲಿ ಈ ಸೇವೆ.....

ಸೃಷ್ಟಿಯ ಒಳಿತಿಗಾಗಿ ....
ದೇಶದ ಭವಿಷ್ಯಕ್ಕಾಗಿ .....
ಗೋವುಗಳ ಉಳಿವಿಗಾಗಿ....
ಗುರುವಿನ ಸಂಕಲ್ಪಸಿದ್ಧಿಗಾಗಿ....
ನಿನ್ನ ಶ್ರೇಯಸ್ಸಿಗಾಗಿ....

ಈ ಮಹತ್ಕಾರ್ಯ ಸಾಧನೆಯಲ್ಲಿ ನೀನು ಇಂದಿನಿಂದಲೇ ಕಾರ್ಯ ಪ್ರವೃತ್ತನಾಗುವೆಯೆಂದು ಆಶಿಸುವೆವು......
ನಿನ್ನ ದಾರಿಯು ಸದಾ ಬೆಳಕಾಗಿರಲೆಂದು ಮಹಾಗುರು ಶ್ರೀ ಆದಿಶಂಕರಾಚಾರ್ಯರಲ್ಲಿಯೂ,
ಈ ಮಹೋನ್ನತ ಗುರಿಯೆಡೆಗೆ ನಿನ್ನನ್ನು ಕೈಹಿಡಿದು ಮುನ್ನಡೆಸೆಂದು ಮಹಾಪ್ರಭು ಶ್ರೀರಾಮಚಂದ್ರನಲ್ಲಿಯೂ ಮನದುಂಬಿ ಸಂಪ್ರಾರ್ಥಿಸುವೆವು...

**ವಂದಾಮಹೇ ವಿಶ್ವಜನನೀಮ್**

॥ ವಂದೇ ಗೋ ಮಾತರಮ್ ॥

ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಗೋಕರ್ಣ ಮಂಡಲಾಧೀಶ

**ಶ್ರೀ ಶ್ರೀ ರಾಘವೇಶ್ವರಭಾರತೀ ಮಹಾಸ್ವಾಮೀಜಿ**

ಶ್ರೀರಾಮಚಂದ್ರಾಪುರಮಠ

**ಮಾಸದ ಗೋವು**

# ಖೇರಿಗರ್

**ಮೂವರು ಕುಳಿತ ಬಂಡಿಯನ್ನು ಕಡಿದಾದ ಬೆಟ್ಟದ ರಸ್ತೆಯಲ್ಲಿ ೮–೧೦ ಕಿಲೋಮೀಟರ್‌ಗಳಷ್ಟು ದೂರವನ್ನು ಒಂದು ಪುಟ್ಟ ಗಾತ್ರದ ಖೇರಿಗರ್ ಎತ್ತು ಎಳೆಯಬಲ್ಲುದು ಎಂದರೆ ಆಶ್ಚರ್ಯವಾಗಬಹುದಲ್ಲವೇ?**

ಮಾಸದಗೋವು ಅಂಕಣದಲ್ಲಿ ಈ ಬಾರಿ ಹೇಳಹೊರಟಿರುವುದು ಖೇರಿಗರ್ ಎಂಬ ವಿಶಿಷ್ಟತಳಿಯ ಕುರಿತಾಗಿ.

ನಂಬಿ; ಈ ತಳಿಯೊಂದು ಅಚ್ಚರಿ. ಕಾರಣ ಇದರ ಆಹಾರ. ಇದರ ಆಹಾರಸೇವನೆಯ ಪ್ರಮಾಣಕ್ಕೂ ಇದರ ಕಾರ್ಯಸಾಮರ್ಥ್ಯಕ್ಕೂ ಒಂದಕ್ಕೊಂದು ಅರ್ಥಾತ್ ಸಬಂಧವಿಲ್ಲ. ಇಷ್ಟೇ ತಿಂದು ಅಷ್ಟು ಹೊತ್ತಿತೇ? ಅಷ್ಟು ನಡೆದಿತೆ? ಅಷ್ಟು ಊಳಬಲ್ಲುದೆ? ಎಂದು ಮೂಗಿನಮೇಲೆ ಬೆರಳಿಡುವ ಹಾಗಿದೆ ಖೇರಿಗರ್.



*ಖೇರಿಗರ್ ಹಸು, ಉತ್ತರ ಪ್ರದೇಶ*

ಖೇರಿಗರ್ ಎಂಬ ಮಧ್ಯಮಗಾತ್ರ ಅಲ್ಲ ಪುಟ್ಟಗಾತ್ರದ ಗೋವು ಎಂದೇ ಎನ್ನಬೇಕು; ಆಕಳಿನ ಮೂಲ ಉತ್ತರಪ್ರದೇಶದ ಲಕೀಂಪುರ ಜಿಲ್ಲೆಯ ಖೇರಿ. ಖೇರಿ ಮೂಲ ಎಂದಿದ್ದರೂ, ಭಾರತ–ಟಿಬೇಟ್ ಗಡಿಯಗುಂಟ ಇರುವ ಬೆಟ್ಟಪ್ರದೇಶಗಳವರೆಗೂ ಇದರದ್ದೇ ಕಾರುಬಾರು. ’ಅಲ್ಲಿನ ಕಟ್ಟನೆಯ ಚಳಿಯನ್ನೂ ಲೆಕ್ಕಿಸದೆ ಎತ್ತರದ ಗುಡ್ಡಗಳನ್ನೇರುವ, ಸುಲಭವಾಗಿ ಹೊರೆಭಾರವನ್ನೆಳೆವ ಇದರ ಧಿಮಾಕು ನೋಡಲು ಅತಿಸೊಬಗು’ ಎನ್ನುತ್ತಾರೆ ಅರುಣ್ ನೆಟ್ಟಾರ್. ಹೊಸನಗರದ ಅಮೃತಧಾರಾ ಗೋಶಾಲೆಗಾಗಿ ನೇಪಾಳಗಡಿ ಬಳಿಯ ನಿಗಪುರ್ ಎಂಬ ಪುಟ್ಟಹಳ್ಳಿಗೆ ಶುದ್ಧ ಖೇರಿಗರ್ ಹುಡುಕಿಹೋದ ಇವರ ಕತೆಯನ್ನು ಕೇಳುವುದೇ ಒಂದು ರೋಮಾಂಚಕ ಅನುಭವ. 8–10 ಕಿಲೋಮೀಟರಗಳಷ್ಟು ಸಂಪೂರ್ಣ ಕಡಿದಾದ ಕಚ್ಚಾರಸ್ತೆಯಲ್ಲಿ ಒಂದು ದೊಡ್ಡ ಉಸಿರನ್ನೂ ಎಳೆದುಕೊಳ್ಳದೆ ಮೂವರು ಕುಳಿತ ಬಂಡಿಯನ್ನು ಒಂದು ಪುಟ್ಟ ಹೋರಿ ಎಳೆಯುವುದನ್ನು ನೋಡಿ ನಾನು ಚಕಿತನಾಗಿ ಬಿಟ್ಟೆ ಎಂದು ತಮ್ಮ ಅನುಭವ ಹಂಚಿಕೊಳ್ಳುತ್ತಾರವರು.

ಖೇರಿಗರ್ ಗೋವುಗಳದ್ದು ಶುದ್ಧ ಬಿಳಿಯಬಣ್ಣ. ಮುಖ, ಬಾಲದ ಕುಚ್ಚು ಮಾತ್ರ ಕಡುಗಪ್ಪು; ದೃಷ್ಟಿಬೊಟ್ಟಿನ ಹಾಗೆ. ಸ್ವಲ್ಪ ನಮ್ಮ ಮಾಳ್ವಿ ತಳಿಯನ್ನು ಹೋಲುತ್ತಾದರೂ ಒಂದೆರೆಡು ಬಾರಿ ನೋಡಿದರೆ ಗುರುತಿಸಬಹುದಾದಷ್ಟು ವ್ಯತ್ಯಾಸಗಳಿವೆ. ಕರಾವು ಸ್ವಲ್ಪ ಕಡಿಮೆಯೆ ಎನ್ನಬೇಕು; ದಿನಕ್ಕೆ 3–4 ಲೀಟರುಗಳು.

ಖೇರಿಗರ್ ತಳಿಯ ಹೋರಿಗಳು 4 ವರ್ಷಕ್ಕೇ ದುಡಿಯಲು ಸಮರ್ಥವಾಗಿಬಿಡುತ್ತವೆ. ಒಂದು ಜೊತೆ ಎತ್ತುಗಳು ಸಲೀಸಾಗಿ ಒಂದುವರೆ ಟನ್‌ಗಳಷ್ಟು ಭಾರವನ್ನು 30–35 ಮೈಲಿಗಳಷ್ಟು ದೂರವನ್ನು ಘಂಟೆಗೆ 4 ಮೈಲಿಯಂತೆ ಎಳೆಯಬಲ್ಲವು. ಅದಕ್ಕಾಗಿಯೇ ಉತ್ತರಪ್ರದೇಶದ ಬುಡಕಟ್ಟು ಪ್ರದೇಶ ಸೇರಿದಂತೆ ಹಲವು ಆಧುನಿಕ ಸಾರಿಗೆ ವ್ಯವಸ್ಥೆಗಳಿಲ್ಲದ್ದಲ್ಲಿ ಮುಖ್ಯ ಸಾರಿಗೆ ಖೇರಿಗರ್.



ಇದರೊಟ್ಟಿಗೆ, ಉಳಿದ ತಳಿಗೆ ಹೋಲಿಸಿದಲ್ಲಿ ಗಣನೀಯವಾಗಿ ಕಡಿಮೆ ಆಹಾರ ಸೇವಿಸುವುದರಿಂದ ತಾವು ಖೇರಿಘರ್ ತಳಿಯನ್ನೇ ಸಾಕಲು ಹೆಚ್ಚು ಇಷ್ಟಪಡುತ್ತೇವೆ ಎನ್ನುತ್ತಾರೆ ಅಲ್ಲಿನ ರೈತರು.

**–ಮಧುಕೇಶ ದೊಡ್ಡೇರಿ**

**ಮೂಲ : ಉತ್ತರ ಪ್ರದೇಶದ ಲಕೀಂಪುರ ಖೇರಿ ಜಿಲ್ಲೆ**
**ವಿಭಾಗ : ಕೆಲಸಗಾರ**
**ಬಣ್ಣ : ಬಿಳಿ**
**ಮುಖ : ನೀಳ**
**ಮೂತಿ : ಕಪ್ಪು**
**ಕೊಂಬು : ಸಣ್ಣ**
**ಕಣ್ಣು : ಕಪ್ಪು**
**ಬಾಲ : ನೀಳ**

**ಗೋಗೀತೆ**

# ಸಾವಿರದ ಗೋವು

**ಮಲೆನಾಡಿನ ಹಳ್ಳಿಯಲ್ಲಿ ಮುಂಜಾನೆ ಕಂಡುಬಂದ ದೃಶ್ಯವನ್ನು ಕ್ಯಾಮರಾ ಸೆರೆಹಿಡಿಯಿತು. ಅದ ಕಂಡು ಮನ ಪುಲಕಗೊಂಡಿತು. ಒಡನೆಯೇ ಹೊರಹೊಮ್ಮಿತು ಭಾಮಿನಿ ಷಟ್ಪದಿಯಲ್ಲೊಂದು ಗೋಗೀತೆ.**

ಪುಳಕಗೊಂಡಿತು ಎನ್ನ ಮೈಮನ
ಜಳಕದಂದವ ಕಂಡು ಊರಿನ
ಹೊಳೆಯ ದಂಡೆಯ ಮೇಲೆ ಮೆಲ್ಲನೆ ನಡೆಯುತಿರಲೊಮ್ಮೆ
ಬಳಲಿಕೆಯು ಬಳುಕಿತ್ತು ಕಾಣುತ
ಅಳೆಯಲಸದಳವಾದ ದೃಶ್ಯವ
ಬಳಪವನು ಕೈಗೆತ್ತಿ ಚಿತ್ರಿಪೆ ಥಳಕು ಸೇರಿಸದೇ

ಜಂಟಿ ಚಕ್ರಗಳುರುಳುತಿರೆ ನಡೆ
ದೊಂಟಿ ಎತ್ತಿನ ಗಾಡಿ ಕಂಚಿನ
ಕಂಟದಲಿ ಜಾನಪದ ಗೀತೆಯ ದನಿಯು ಮೊಳಗುತಿರೆ
ನಂಟು ಮನದಲಿ ಉದಿಸೆ ಕಲ್ಲಿನ
ಮಂಟಪದ ಬಳಿ ಕೊರಳ ಹಗ್ಗದ
ಗಂಟು ಸಡಿಲಿಸುತಿರುವ ರೈತನ ಮೊಗವು ಕಾಣಿಸಿತು

ಹಗಲು ಮುಗಿಯುವ ತವಕದಿಂದಿರೆ
ನೊಗವ ಹೆಗಲಿಂದಿಳಿಸಿ ಎತ್ತಿನ
ತೊಗಲ ಮೇಗಂಟಿರುವ ಕೊಳೆಯನು ಕಳೆಯಬೇಕೆನುತ
ಸೊಗಡನಾಘ್ರಾಣಿಸುತ ಮುದದಲಿ
ಬೊಗಸೆಯಲಿ ಜಲವನ್ನು ಮೊಗೆಯುತ
ಸೊಗಸಿನಲಿ ಮೈಮರೆತ ರೈತನು ಮೈಯ ಸವರುತಿರೆ





ಹರಿಯುತಿಹ ಆ ತೊರೆಯ ನೀರಲಿ
ತೆರೆಗಳೇಳುತ ಲಹರಿಯಲಿ ತಾ
ತಿರುಗಲಾರಂಭಿಸಿದ ಚಳಕವ ಕಂಡು ವಿಸ್ಮಯದಿ
ಶಿರವ ಬಾಗುತಲಂದು ಪ್ರಕೃತಿಗೆ
ಮರೆತೆನಿರವನು ತಮದ ಪರದೆಯು
ಸರಿದು ಮೂಡಿತು ಮನಸಿನಾಗಸದಲ್ಲಿ ಪ್ರಶ್ನೆಯದೋ

ಗೋವು ಪಾದವನೂರುತಿರೆ ಜಲ
ಪಾವನತ್ವವು ಲಭಿಸಿತೆನ್ನುವ
ಭಾವನೆಯಲತ್ತಿತ್ತ ಕುಣಿಯುತ ಸುತ್ತುವರಿದಿಹುದೋ?
ಮೀವ ನೀರಿನ ಹನಿಗಳುದುರುತ
ಸೇವೆಗೈದಿಹೆಯೆಂಬ ಸೊಗದಲಿ
ಸಾವಿರದ ಸಂಖ್ಯೆಯಲಿ ಗೋವಿನ ನಾಮ ಜಪಿಸಿಹುದೋ?

**– ರಘುರಾಮ ಮುಳಿಯ**

**ನೆನಪು**

# ಮಹಾನಂದಿ

ಅಖಂಡ ಇಪ್ಪತ್ತು ವರ್ಷಗಳ ಕಾಲ ಸಂತತ ಸನ್ಯಸ್ತ ಸಂತನಂತೆ, ಧರ್ಮಸಾರ್ಥಕ್ಯದ ಬಾಳನ್ನು ಬದುಕಿ. ಅದೇ ಧರ್ಮಸಾರ್ಥಕ್ಯದ ಬದುಕಿನ ಮರ್ಮವನ್ನು ಅನಾಗರೀಕ ಎಂದು ಕರೆಯಲ್ಪಡುವ ಆ ಅಂದಿನ ಮಾನವ ಬದುಕಿನ ಆರಂಭದಿಂದ ಇಂದಿನ ನಾಗರೀಕಜಗದ ಬದುಕಿನವರೆಗೆ ಹದವಾಗಿ ಹಬ್ಬಿಸಿ, ಗೋಜಾಗೃತಿಯ ಸಂದೇಶವನ್ನು ಮನುಕುಲಕ್ಕೆ ಪರೋಕ್ಷವಾಗಿ ತಿಳಿಸಿ ನಮ್ಮ ಶ್ರೀ ಮಠದ ಗೋಶಾಲೆಯ ಗಂಭೀರತೇಜಸ್ವೀ ಮಹಾನಂದಿ ಇತ್ತೀಚೆಗೆ ಕೊನೆಯುಸಿರೆಳೆದ. ಹೌದು, ಆತನಿಗೆ ಮೋಕ್ಷ ಸಿಕ್ಕಿರುತ್ತದೆ.



ಇತಿಹಾಸಕಾರರ ಭಾಷೆಗಳಲ್ಲಿ ಅನೇಕ ಯುಗಾಂತರಗಳನ್ನು ಕಳೆಯುತ್ತ ಬಂದ ಮಾನವ ಕುಲಕ್ಕೆ ಒಂದು ಹಂತದಿಂದ ಜೀವನಸಾಂಗತ್ಯವನ್ನು ಒದಗಿಸಿದ್ದು, ಸಂಗೋಪನ ವೃತ್ತಿ. ತುಂಬುಕೆಚ್ಚಲಿನಿಂದ ಗೋವುಗಳು ಸುರಿಸುವ ಅಮೃತದಂಥ ಹಾಲಿನಿಂದ ಹಿಡಿದು, ಮೂತ್ರ ಸೆಗಣಿಗಳ ಬ್ರಹ್ಮಾಂಡರೂಪೀ ಪ್ರಯೋಜನಗಳನ್ನು ಮಾನವ ಅನುಭವಿಸುತ್ತ ಬಂದಿದ್ದಾನೆ. ಭೂಮಂಡಲದ ಯಾವುದೇ ಮೂಲೆಯ ಮಾನವನಾಗಿರಲಿ, ಇಂದು ಸ್ವಾಸ್ಥ್ಯದ ಜೀವನಕ್ಕೆ ಮೂಲಭೂತವಾಗಿ ಸಂಗೋಪನವೆಂಬುದು ಅತ್ಯಂತ ಅನಿವಾರ್ಯ. ಅಡುಗೆಗೆ ಸುಡುವ ಬೆರಣಿಗಳಿಂದ ಹಿಡಿದು ಸತ್ತ್ವಶೋಧನೆಗೆ ಬೇಕಾಗುವ ಪಂಚಗವ್ಯದವರೆಗೆ ಗೋವುಗಳು ನಮ್ಮನ್ನು ಪೊರೆಯುವ ರೀತಿ ನಿಜಕ್ಕು ಅನನ್ಯ. ನಾವು ಕೊಡುವ ನಾಲ್ಕು ಹುಲ್ಲುಕಡ್ಡಿಗಳನ್ನು ಮೆಂದು ನಿಃಸ್ವಾರ್ಥವಾಗಿ ನಮ್ಮನ್ನು ಪೋಷಿಸುವ ಗೋವುಗಳ ಸಾತ್ವಿಕ ಬದುಕಿನ ಬಗ್ಗೆ ನಾನೇನು ಹೇಳಲಿ? ನಿಷ್ಕಲ್ಮಶ ಮನಸ್ಸಿನಿಂದ ಈ ಸಂಗತಿಯನ್ನು ಚಿಂತಿಸುವ ಎಲ್ಲ ಮನುಷ್ಯರಿಗೆ ಅದು ಹೊಳೆದೀತು.

ಅಂಥ ಮಹಾನಂದಿ, ಅಣುಲೋಕದ ಆಗುಹೋಗುಗಳಿಗೆ ಸಾಕ್ಷಿಯಾಗಿ ಮಹತ್ತಿನತ್ತ ಹೊರಟುಹೋದ. ಆತನ ಆತ್ಮವು ಪ್ರಾಯಃ ಆತನೆತ್ತಿದ ಕಡೆಯ ಶುದ್ಧಾವತಾರದಿಂದ ಶಾಂತನಾಗಿ ಮುಕ್ತಿ ಕಂಡಿರಬಹುದು.

**ಶ್ರೀಮಠದ ಗೋಶಾಲೆಗೆ ಮಹಾನಂದಿ**

ಗುರುಗಳಾದ ಶ್ರೀ ರಾಘವೇಶ್ವರ ಭಾರತಿಗಳ ಮನೋಮಂಡಲದಲ್ಲಿ ಗಾವೋ ವಿಶ್ವಸ್ಯ ಮಾತರಃ ಎಂಬ ಶ್ರುತಿವಾಕ್ಯದ ಋತವು ಸತ್ಯದ ತಳಹದಿಯಲ್ಲಿ ಧರ್ಮದ ಅನುಷ್ಠಾನಕ್ಕೆ ಪ್ರೇರೇಪಣೆಯಾಗುತ್ತ ಸಂಗೋಪನಕ್ರಾಂತಿಯತ್ತ ಚಿತ್ತ ತುಡಿಯುತ್ತಿದ್ದ ಕಾಲ. ೨೦೦೧ರ ಗುರುಗಳ ಪೂನಾ ಪ್ರವಾಸದಲ್ಲಿ ಹೋರಿಯ ರೂಪದಲ್ಲಿದ್ದ ಸಂತ ಕಂಡ. ಇಲ್ಲಿ ನಿಜಕ್ಕೂ ಗಮನಿಸಬೇಕಾದ ಅಂಶವೊಂದಿದೆ. ಮಹತ್ತಿಗೆ ಮಾತ್ರ ಮಹತ್ತಿನ ಪರಿಚಯವಾಗುತ್ತದೆ. ಸಂತರಿಗೆ ಮಾತ್ರ ಸಂತರ ರಸತಂತ್ರವು ಅರ್ಥವಾಗುತ್ತದೆ. ಹಾಗೆ ಶ್ರೀ ಗುರುಗಳಿಗೆ ಇಡೀ ಜಗತ್ತಿನ ಕಣ್ಣಿಗೆ ಹೋರಿಯ ರೂಪದಲ್ಲಿ ಕಾಣಿಸಿಕೊಂಡ ಆತ ಕಂಡ. ಗುರುಗಳು ಅವನನ್ನು ಮಹಾನಂದಿ ಎಂದು ಕರೆದರು, ಅವನು ಬಾಲವನ್ನಾಡಿಸಿ ತಲೆತಗ್ಗಿಸಿ ಗುರುಗಳನ್ನು ಅನುಸರಿಸಿಬಿಟ್ಟ! ಶ್ರೀ ಮಠದ ಗೋಶಾಲೆಯ ಆವರಣದಲ್ಲಿ ಕಳಶ ಪ್ರಾಯವಾದ ಉತ್ಕಟ ವೈಕುಂಟದಂಥ ಮಹಾನಂದಿ ಬಂದು ನಿಂತುಬಿಟ್ಟ!

**ಗಂಭೀರ ಘನರೂಪಧೀ ಮಹಾನಂದಿ!**

ಅದು ಪ್ರಾಯಃ ೨೦೦೨. ಶ್ರೀಮಠದಲ್ಲಿ ಆಯುರ್ವೇದ ಮತ್ತು ನಾಟೀ ವೈದ್ಯರ ಸಮ್ಮೇಳನ ನಡೆಯುತ್ತಿದ್ದ ಹೊತ್ತು. ಆಗಿನ್ನು ಆಯುರ್ವೇದ ವಿದ್ಯಾರ್ಥಿಯಾಗಿದ್ದ ನಾನು ಸಮ್ಮೇಳನಕ್ಕೆ ಕಾಲೇಜಿನ ವತಿಯಿಂದ ಹೋಗಿದ್ದೆ. ಹುಡುಗಾಟದ ಬುದ್ಧಿಯಲ್ಲಿ ಗೋಶಾಲೆಯನ್ನು ಸಹಪಾಠಿಗಳೊಂದಿಗೆ ಪ್ರವೇಶಿಸಿದ್ದ ನನಗೆ ಮಹಾನಂದಿ ಕಂಡದ್ದು, ದೊಡ್ಡ ದೇವಸ್ಥಾನವೊಂದರ ವಿಶಾಲ ಪ್ರಾಂಗಣದೊಳಗೆ ಗರ್ಭಗುಡಿಯಲ್ಲಿ ನಿಂತ ದೇವರ ಮಹಾಮೂರ್ತಿಯಂತೆ!, ಅರಮನೆಯೊಂದರ ದರ್ಬಾರಿನ ಮಧ್ಯದಲ್ಲಿ ಸಿಂಹಾಸನವನ್ನೇರಿ ದಿವ್ಯತೇಜಸ್ವೀ ಮುಕುಟಧಾರಿಯಾಗಿ ದಿಟ್ಟರೀವಿಯಲ್ಲಿ ಕುಳಿತ ಚಕ್ರವರ್ತಿಯಂತೆ! ಆಹ್! ಅದೆಂಥ ನಿಲುವು! ಕೇವಲ ದೃಶ್ಯರೂಪವನ್ನು ಎದುರಿಟ್ಟು ಅದೃಶ್ಯವಾದ ಭಾವರೂಪವೊಂದನ್ನು ಮಾನಸಸಂವಹನದ ಮೂಲಕ ನೋಡುಗನ ಮನಸ್ಸಿನಲ್ಲಿ ಚಿತ್ರಿಸುವ ಆ ಪ್ರಭಾವ! ಶ್ವೇತವರ್ಣದ ನೀಳಕಾಯ, ಉದ್ದವಾದ ಕಾಲುಗಳು, ಚಂದ್ರಮಡಲಂಥ ಶ್ಯಾಮವರ್ತುಲದ ನಡುವೆ ಹೊಳೆಯುವ ಮುದ್ದಾದ ಕಣ್ಣುಗಳು, ಕಣ್ಣುಗಳ ನಡುವೆ ವಿಶಾಲವಾಗಿ ಮೃದುರೋಮಗಳಿಂದ ಹರಡಿಕೊಂಡು ಮುಂಚಾಚಿಕೊಂಡ ಲಲಾಟ, ಉದ್ದನೆಯ ಮಿದುವಾದ ನೀಳಶಂಖದಂಥ ವಿಸ್ಮಯರೂಪೀ ಕಿವಿಗಳು, ದಪ್ಪ ಗಿಡ್ಡ ಕೋಡುಗಳು. ನಾನು ನನ್ನ ಕಣ್ಣೆದುರಿಗೆ ನಿಂತ ಆ ಮಹಾಮೂರ್ತಿಯನ್ನು ಮನಸಾರೆ ಕಣ್ತುಂಬಿಕೊಂಡು ಅಲ್ಲಿಂದ ಹೊರಟಾಗ ನಿಜಕ್ಕೂ ಸಾರ್ಥಕಭಾವ, ಗೋವಿನ ರೂಪದ ಆ ಸಂತನ ಬಗ್ಗೆಯೂ, ಗುರುಗಳ ರೂಪದ ಸಂತನ ಬಗ್ಗೆಯೂ.

### ಆತನಿಗೆ ಅಸ್ವಾಸ್ಥ್ಯವೆಂದೂ ಕಾಡಲಿಲ್ಲ!

ಶ್ರೀಮಠದ ಗೋವುಗಳ ವೈದ್ಯರಾದ ಡಾ. ಕೃಷ್ಣಮೂರ್ತಿಯವರ ಮಾತಿನಂತೆ, ಇತ್ತೀಚೆಗೆ ತೀರಿಕೊಳ್ಳುವದಕ್ಕೆ ಒಂದು ತಿಂಗಳ ಮುಂಚೆಯಿಂದ ದ್ರವರೂಪದ ಹಿಂಡಿಯನ್ನು ಮಾತ್ರ ಸೇವಿಸುವುದನ್ನು ಬಿಟ್ಟರೆ, ವಯೋಸಹಜವಾಗಿ ಹಲ್ಲುಗಳು ಉದುರಿ ಹೋಗುತ್ತಿದ್ದುದನ್ನು ಬಿಟ್ಟರೆ, ಮಹಾನಂದಿಯು, ಎಂದೂ ಅಸ್ವಾಸ್ಥ್ಯದಿಂದ ನರಳಿದ ಉದಾಹರಣೆಯಿಲ್ಲ! ಅಮೋಘ ಇಪ್ಪತ್ತು ವರ್ಷಗಳ ಜೀವನದಲ್ಲಿ ಎಂದೂ! ಅಂಥ ಸ್ವಸ್ಥ ಸುಂದರ ಬದುಕು ಮಹಾನಂದಿಯದ್ದು. ಸಾಮಾನ್ಯವಾಗಿ ಹೋರಿಗಳು ಪರಸ್ಪರ ಹಾಯುವುದು ಜಗಳವಾಡುವುದು ಇದ್ದದ್ದೆ. ಆದರೆ ಮಹಾನಂದಿ ತನ್ನ ಜೀವಿತಾವಧಿಯಲ್ಲಿ ಪರಸ್ಪರ ಜಗಳವಾಡುವುದು ಒತ್ತಟ್ಟಿಗಿರಲಿ, ಮನುಷ್ಯರನ್ನೂ ಹಾಯಲಿಲ್ಲ! ಎಂದೂ ಅನಗತ್ಯ ಕೂಗಲಿಲ್ಲ. ಗೋಶಾಲೆಯ ಪರಿಚರರನ್ನು ಅನಗತ್ಯ ಕೂಗಿ ಕಾಡಲಿಲ್ಲ. ಕಾಲಕ್ರಮೇಣ ಗೋಶಾಲೆಯ ಪರಿಚರರಿಗೆ ವೇದ್ಯವಾದ ವಿಷಯವೆಂದರೆ, ಮಹಾನಂದಿ ಕೂಗಿದನೆಂದರೆ ಗೋಶಾಲೆಯಲ್ಲಿ ಎಂಥದ್ದೊ ಸಮಸ್ಯೆಯಾಗಿದೆ! ಎಂಥ ನಿರ್ವಿಕಾರದ ಸತ್ತ್ವಭೂತವಾದ ಬದುಕು ಅದು.

ಮತ್ತೊಂದು ಗಮನಿಸಬೇಕಾದ ಆತನ ನಡೆಯೆಂದರೆ, ಹುಲ್ಲುಗಾವಲಿನಲ್ಲಿ ಹಸು ಹೋರಿಗಳೆಲ್ಲ ಒಂದಿಗೆ ಮೇಯುವಾಗ ಮಹಾನಂದಿ ನಾಯಕನಿದ್ದಂತೆ. ಮಹಾನಂದಿಯು ನಡೆದ ಮಾರ್ಗದಲ್ಲೆ, ಅಲ್ಲೆ ಆಸುಪಾಸಿನಲ್ಲೆ ಉಳಿದ ಹಸುಗಳೂ ಮೇಯುತ್ತಿದ್ದವು. ಮೇಯುವ ಆ ತಾಣಗಳಲ್ಲಿ ಯಾವುದಾದರೂ ಹೋರಿಗಳು ಕಿತ್ತಾಡತೊಡಗಿದರೆ, ಅಲ್ಲಿ ಮಹಾನಂದಿಯ ಪ್ರವೇಶ ಮತ್ತು ಸಂಧಾನ! ಆತ ಕೇವಲ ಒಂದು ಹೋರಿಯಾಗಿ ಇತರ ಹೋರಿಗಳಂತೆ, ಹಸುಗಳಂತೆ ಎಂದಿಗೂ ಬದುಕಲಿಲ್ಲ. ಬದಲಾಗಿ ಗೋಶಾಲೆಯ ಎಲ್ಲ ಹಸುಗಳಿಗೆ ಆತ ಒಡೆಯನಾಗಿದ್ದ. ಗೋವಿನ ರೂಪ ಧರಿಸಿದ್ದ ರಾಜಸಂತನೋ ಅತ? ಹೌದು.

### ಹಿಂದಿನ ಜನ್ಮದ ಸಂತ!

ಅದು ಸಂಸ್ಥಾನದ ಕೊಯಮತ್ತೂರಿನ ಪ್ರವಾಸದ ಕಾಲ. ಶ್ರೀಗುರುಗಳು ಮಹಾನಂದಿಯ ಅಚ್ಚರಿಯ ಜೀವನಪದ್ಧತಿಯನ್ನು ಬೆರಗಿನಿಂದ ಕಾಣಲಾಗಿ, ಸಂಸ್ಥಾನವು ನಡೆಸಿದ ಅಷ್ಟಮಂಗಲಪ್ರಶ್ನದಲ್ಲಿ ಬಂದ ಉತ್ತರದಂತೆ, ಮಹಾನಂದಿ ತನ್ನ ಹಿಂದಿನ ಜನ್ಮದಲ್ಲಿ ಸರ್ವಸಾತ್ತ್ವಿಕಭಾವಸಂಪನ್ನ ಸಂತ! ಇಹಜನ್ಮದ ಅಡಿಯಡಿಯ ಆತನ ನಡೆವಳಿಕೆಗಳು, ತನ್ನನ್ನು ಕಂಡು ಮುಟ್ಟಿ ಖುಷಿಪಡುವ ಆಬಾಲವೃದ್ಧರತ್ತ ಆತನ ಕಾರುಣ್ಯಪೂರ್ಣ ದೃಷ್ಟಿಯ ಆಳದಲ್ಲಿರಬಹುದಾದ ಶಾಂತರಸ, ಒರಗೆಯ ಹಸುಗಳೊಂದಿಗಿನ ಆತನ ಸಂಬಂಧ, ಯಾರೊಂದಿಗೂ ಎಂದಿಗೂ ಮನಸ್ತಾಪದಂಥ ಮನುಷ್ಯಧರ್ಮವನ್ನು ತೋರಿಸದ ಅವನ ಕೇವಲಸತ್ತ್ವವೃತ್ತಿ, ನಿಲುವು, ಇದನ್ನೆಲ್ಲ ಗಮನಿಸಿದರೆ ಆತ ಹಿಂದಿನ ಜನ್ಮದಲ್ಲಿ ಮನುಷ್ಯರೂಪೀ ಸಂತನಾಗಿರಬಹುದೆಂಬ ವಿಚಾರದಲ್ಲಿ ಯಾವುದೇ ಸಂದೇಹವಿರಲಾರದು. ಕಳೆದ ಜನ್ಮದಲ್ಲಿ ಮನುಷ್ಯರೂಪೀ ಸಂತ, ಈ ಜನ್ಮದಲ್ಲಿ ಆತ್ಯಂತಿಕ ಪುಣ್ಯದ ಹಸುವಿನ ರೂಪದ ಸಂತನಷ್ಟೆ.

### ಶ್ರೀ ರಾಘವೇಶ್ವರ ಭಾರತೀ ಸ್ವಾಮಿಗಳು ಮತ್ತು ಮಹಾನಂದಿ

ಹಿಂದೆ ಹೇಳಿದಂತೆ, ಸಂತರನ್ನು ಸಂತನೇ ಬಲ್ಲ! ಅಂಥ ಸಂತ, ಮಹಾನಂದಿಗೆ ಗುರುಗಳ ಸಂತಜೀವನದ ಪರಿಚಯವಾಗಿಬಿಟ್ಟಿತ್ತು. ಪುಣೆಯಲ್ಲಿ ಗುರುಗಳು ಆತನನ್ನು ಗುರುತಿಸಿದ್ದುದರ ಹಿಂದೆ ಕೂಡ ಮನುಷ್ಯಮಾತ್ರರಿಗೆ ತಿಳಿಯದ ದಿವ್ಯಸಂವಹನವೊಂದು ಇವರೀರ್ವರ ನಡುವೆ ಸಂಚರಿಸಿದ್ದುದರ ಕುರಿತು ಯಾವುದೇ ಆಶ್ಚರ್ಯಸೂಚಕದ ಅಗತ್ಯವಿಲ್ಲ. ಮಹಾನಂದಿಯು ಗುರುಗಳನ್ನು ಇತ್ತೀಚೆಗೆ ತುಂಬ ಹಚ್ಚಿಕೊಂಡುಬಿಟ್ಟಿದ್ದ. ಮಹಾನಂದಿಗೆ ನಿತ್ಯ ಬೆಲ್ಲ ತಿನ್ನಿಸುವುದು ಸಂಸ್ಥಾನದ ವಾಡಿಕೆ. ಗುರುಗಳು ಶ್ರೀಮಠದಲ್ಲಿ ಇದ್ದಷ್ಟೂ ಕಾಲ ನಿತ್ಯ ಮಹಾನಂದಿಯನ್ನು ಕಂಡು ಮಾತನಾಡಿಸಿ ಬೆಲ್ಲ ತಿನ್ನಿಸಿ ಮೈದಡವಿ ಬರುತ್ತಿದ್ದರು. ಕಾರ್ಯ ನಿಮಿತ್ತ ಅಂದೊಂದು ದಿನ, ಗುರುಗಳು ಬೆಂಗಳೂರಿಗೆ ಬಂದಾಗ, ಅಲ್ಲಿ ಗೋಶಾಲೆಯಲ್ಲಿ ಮಹಾನಂದಿ ಮಾಡಿದ್ದು ಎರಡು ದಿನಗಳ ಘೋರ ಉಪವಾಸ! ಅದೆಂಥ ತೀವ್ರ ಸ್ವಸ್ಥಸಂಬಂಧ! ಇಂದು ಮನುಷ್ಯರಲ್ಲಿ ಅಗತ್ಯವಾಗಿ ಕಾಣಬೇಕಾದ, ದುರದೃಷ್ಟವಶಾತ್ ಕಾಣಲಾಗದ ಆ ತೀವ್ರವಾದ ಸಾತ್ವಿಕ ಗುಣವನ್ನು ಮಹಾನಂದಿ ಬದುಕಿನುದ್ದಕ್ಕೂ ಅನುಭವಿಸಿ, ಪ್ರದರ್ಶಿಸಿ ಹೊರಟುಹೋದ. ಅದು ಕೇವಲ ನಿರ್ವ್ಯಾಜ ಮಾನವಪ್ರೇಮವಾ? ಮಾತು ಬಾರದ, ಮಾತನ್ನಾಡದ ಆ ಪಶುವಿನ ಶರೀರದಲ್ಲಿದ್ದು ತನ್ನ ನುಡಿ ಬಾರದ ನಡೆಯಲ್ಲೆ ಮನುಕುಲದ ಸ್ವಾಸ್ಥ್ಯಕ್ಕೆ ಸಂದೇಶಗಳನ್ನಿತ್ತು ಹೊರಟುಹೋದನಲ್ಲ ಮಹಾನಂದಿ!

ಇತ್ತೀಚೆಗೆ ಸಂಸ್ಥಾನವು ತೆಗೆದುಕೊಂಡ ನಿರ್ಧಾರದಂತೆ, ಇನ್ನು ಮುಂದೆ ಶ್ರೀಮಠದ ಗೋಶಾಲೆಯು ಮಹಾನಂದಿ ಎಂಬ ಹೆಸರಿನಿಂದ ಮುನ್ನಡೆಯಲಿದೆ.

ಅಂಥ ಸಂತ ಮಹಾನಂದಿಗೆ ನಮ್ಮೆಲ್ಲರ ಅಕ್ಷರನಮನ.

**– ಡಾ। ಕಣಾದ ರಾಘವ**

## ಸಂಪಾದಕರ ನುಡಿ

ಬೆಂಗಳೂರಿನ ಗಿರಿನಗರದಲ್ಲಿ ಅಕ್ಟೋಬರ್ 27, 2007ರಂದು ಪೇಜಾವರ ಮಠಾಧೀಶ್ವರ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರಿಂದ ಈ **ಗೋ ವಿಶ್ವ** ಇ-ಪತ್ರಿಕೆಯ ಪ್ರಥಮ ಸಂಚಿಕೆಯ ಲೋಕಾರ್ಪಣೆ ಜರುಗಿತು. ನಿಮ್ಮ ಕೈಯಲ್ಲಿರುವುದು 33ನೆಯ ಸಂಚಿಕೆ. ಈ ಪತ್ರಿಕೆ ಅಂತರಜಾಲದಲ್ಲಿ ಮಾತ್ರ ಲಭ್ಯ. ಇದೇ ಸಂಚಿಕೆಯ ಮುಖಪುಟದಲ್ಲಿ ಇದರ ಜಾಲತಾಣದ ವಿಳಾಸವಿದೆ. ಅಲ್ಲಿಗೆ ಭೇಟಿ ನೀಡಿ ಹಿಂದಿನ ಸಂಚಿಕೆಗಳನ್ನು ಓದಬಹುದು. ಭಾರತೀಯ ಗೋತಳಿಯ ಎಲ್ಲ 33 ಪ್ರಭೇದಗಳನ್ನು ಈ ಇ-ಪತ್ರಿಕೆಯ ಮೂಲಕ ಪರಿಚಯಿಸಲಾಗಿದೆ. ಗೋ ಆಧಾರಿತ ಜೀವನ ಈಗಿನ ಕಾಲದಲ್ಲಿಯೂ ಹೇಗೆ ಸಾಧ್ಯ ಎಂಬ ಲೇಖನಗಳನ್ನು ವಿವಿಧ ಕ್ಷೇತ್ರಗಳಲ್ಲಿ ನೀಡಲಾಗಿದೆ. ಒಂದು ಸೀಮಿತ ವ್ಯಾಪ್ತಿಯ ವಿಷಯಗಳ ಪರಿಧಿಯಲ್ಲಿ ನೀಡಬೇಕಾದ ಬಹುತೇಕ ವಿಷಯಗಳನ್ನು ಈ ಪತ್ರಿಕೆಯ ಮೂಲಕ ನೀಡಲಾಗಿದೆ. ಈ ಪತ್ರಿಕೆಯಲ್ಲಿ ಮೂಡಿಬಂದ ಉತ್ತಮ ಲೇಖನಗಳನ್ನು ಒಟ್ಟು ಸೇರಿಸಿ ಪುಸ್ತಕ ರೂಪದಲ್ಲಿ ನೀಡುವ ಇರಾದೆ ಇದೆ. ತಮ್ಮ ಸಲಹೆಗಳಿಗೆ ಸ್ವಾಗತ.